# ಅಂಗೈಯಲ್ಲಿ ಅರಮನೆ

## ಮರಿಕುರಿ

ತರಗತಿಯಲ್ಲಿ ವಿಜ್ಞಾನದ 'ಧಾತುಗಳು ಮತ್ತು ಅವುಗಳ ಸಂಕೇತಗಳು' ಎಂಬ ಪಾಠ ಮಾಡುವಾಗ 'ಪಾದರಸ(ಮರ್ಕ್ಯೂರಿ)'ದ ಬಗ್ಗೆ ತಿಳಿಸಿದ್ದೆ. ಮುಂದೊಂದು ದಿನ ಶಾಲೆಗೆ ಬಂದಿದ್ದ ಅಧಿಕಾರಿಯೊಬ್ಬರು ಮಕ್ಕಳನ್ನು ಮೌಖಿಕವಾಗಿ ಪ್ರಶ್ನಿಸುತ್ತಾ, ಬೋರ್ಡಿನ ಮೇಲೆ Hg ಎಂದು ಬರೆದು, 'ಇದು ಯಾವ ಲೋಹ?' ಎಂದು ಪ್ರಶ್ನಿಸಿದರು. ಮಕ್ಕಳಿಗೆ ಉತ್ತರಿಸಲು ಕಷ್ಟವಾಗತೊಡಗಿತು. ಆಗ ತರಗತಿಯಲ್ಲಿ ಹಿಂದುಗಡೆ ಕುಳಿತಿರುತ್ತಿದ್ದ ವಿದ್ಯಾರ್ಥಿಯೊಬ್ಬ ಥಟ್ಟನೆ 'ಮರಿಕುರಿ' ಎಂದು ಉತ್ತರಿಸಿದ. ಅವನ ಉತ್ತರವನ್ನು ತುಸುವೂ ಅನುಮಾನಿಸದ ಅಧಿಕಾರಿ, 'ಶಹಬ್ಬಾಸ್' ಎಂದರು. ಆ ವಿದ್ಯಾರ್ಥಿಯ ಪೋಷಕರು ಕುರಿ ಸಾಕಣೆಗಾರರಾಗಿದ್ದರಿಂದ ಅವನ ತಲೆಯಲ್ಲಿ 'ಮರ್ಕ್ಯೂರಿ' ಎನ್ನುವುದು 'ಮರಿಕುರಿ' ಆಗಿ ದಾಖಲಾಗಿರಬಹುದು. ಅವನು ಅದನ್ನು ನೆನಪಿಟ್ಟುಕೊಂಡು ಹೇಳಿದ್ದಕ್ಕೂ, ಅಧಿಕಾರಿ ಅದನ್ನು ತಿದ್ದಿಕೊಂಡು, ಸರಿಯಾಗಿ ಗ್ರಹಿಸಿ, ಸರಿ ಉತ್ತರ ಎಂದಿದ್ದಕ್ಕೂ ನನಗೆ ಅಚ್ಚರಿಯಾಗಿತ್ತು.

**ಮಹೇಶ್ವರ ಹುರುಕಡ್ಲಿ**





## ನಾನ್ ವೆಜ್

ಗೆಳೆಯರೊಂದಿಗೆ ಹೋಟೆಲಿಗೆ ಊಟಕ್ಕೆ ಹೋಗಿದ್ದೆವು. 'ನನಗಂತೂ ವೆಜ್ ಥಾಲಿ ಬೇಕು, ನಿಮಗೆ ಯಾರಿಗೆ ವೆಜ್, ಯಾರಿಗೆ ನಾನ್ ವೆಜ್ ಬೇಕು ಹೇಳಿ' ಎಂದ ಗೆಳೆಯ. ಇನ್ನಿಬ್ಬರು ಗೆಳೆಯರು 'ವೆಜ್... ವೆಜ್...' ಎಂದರು. 'ನಿನಗೇನು ಬೇಕು ಹೇಳೊ, ವೇಟರ್ ನಿಂತಿದ್ದಾನೆ' ಎಂದು ಮೊಬೈಲ್ ನೋಡುತ್ತಲಿದ್ದ ನನ್ನನ್ನು ಎಚ್ಚರಿಸಿದರು. 'ನಾನ್ ವೆಜ್' ಎಂದೆ. ವೇಟರ್ ಮೂವರಿಗೂ ವೆಜ್ ಥಾಲಿ ಕೊಟ್ಟು ನನಗೆ ನಾನ್ ವೆಜ್ ಥಾಲಿ ಕೊಟ್ಟ. 'ಅಯ್ಯೊ, ಇದನ್ನ ಯಾಕಯ್ಯ ಕೊಟ್ಟೆ ನಾನ್ ವೆಜ್ ಅಲ್ವೆ ಹೇಳಿದ್ದು?' ಎಂದೆ. 'ಹೌದು ಸರ್, ಇದು ನಾನ್ ವೆಜ್ಜ್' ಅಂದ. 'ನಾನ್ ವೆಜ್ ಅಲ್ಲಯ್ಯ, ನಾನು ವೆಜ್ ಅಂದೆ' ಎಂದು ತಿಳಿಸಿ ಹೇಳಬೇಕಾಯ್ತು.

**ನರಸಿಂಹಾರೆಡ್ಡಿ ಯಂಕಾಮೊಳ**